**A**

**CCE RF**
**CCE RR**
**REVISED**


**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**


**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2020**

**S.S.L.C. EXAMINATION, MARCH / APRIL, 2020**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 01. 04. 2020 ] **ಸಂಕೇತ ಸಂಖ್ಯೆ : 33-K**

Date : 01. 04. 2020 ] **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

**[ ಗರಿಷ್ಠ ಅಂಕಗಳು : 80**

**[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 1. | ದ್ವಿತೀಯ ವಿಭಕ್ತಿಗೆ ಉದಾಹರಣೆಯಾದ ಪದ<br>(ಎ) ಶಾಲೆಯು (ಬಿ) ಗೂಡನ್ನು<br>(ಸಿ) ಮನೆಯಿಂದ (ಡಿ) ಮರಕ್ಕೆ<br>***ಉತ್ತರ :*** (ಬಿ) ಗೂಡನ್ನು | |
| 2. | ಲೋಪ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ಮಾತಿಲ್ಲ (ಬಿ) ಕಾಶಿಯಲ್ಲಿ<br>(ಸಿ) ದೇವಾಲಯ (ಡಿ) ವೀರೇಶ<br>***ಉತ್ತರ :*** (ಎ) ಮಾತಿಲ್ಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | 'ಬಾಂದಳ' ಪದದ ಅರ್ಥ<br>(ಎ) ತಾವರೆ (ಬಿ) ದುಡಿಮೆ<br>(ಸಿ) ಆಕಾಶ (ಡಿ) ಗುರುತು<br>***ಉತ್ತರ :*** (ಸಿ) ಆಕಾಶ | |
| 4. | ದಿಗ್ವಾಚಕ ಪದವಿದು<br>(ಎ) ಕೆಲವು (ಬಿ) ನಾವು<br>(ಸಿ) ಕರ್ನಾಟಕ (ಡಿ) ಪಡುವಣ<br>***ಉತ್ತರ :*** (ಡಿ) ಪಡುವಣ | |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 12 × 1 = 12 |
| 5. | ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ?<br>***ಉತ್ತರ :***<br>ಗಿಳಿಯ ಪರೋಪಕಾರದ ಗುಣವನ್ನು ಇಂದ್ರನು ಮೆಚ್ಚಿಕೊಂಡನು. | |
| 6. | ತಾಯಿ ಸಿದ್ದಮ್ಮ ಪಂಚಾಕ್ಷರ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?<br>***ಉತ್ತರ :***<br>ತಾಯಿ ಸಿದ್ದಮ್ಮ ಪಂಚಾಕ್ಷರ ಗವಾಯಿಗಳ ಪಾದಕ್ಕೆರಗಿ, ಸೆರಗೊಡ್ಡಿ ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡಳು. | |
| 7. | ಗಾಲ್ಫ್ ಚೆಂಡು, ಈರುಳ್ಳಿ ಸಿಪ್ಪೆಗಳಿಂದ ಗೂಡನ್ನು ಅಲಂಕರಿಸಿದ ಹಕ್ಕಿ ಯಾವುದು ?<br>***ಉತ್ತರ :***<br>ಗಾಲ್ಫ್ ಚೆಂಡು, ಈರುಳ್ಳಿ ಸಿಪ್ಪೆಗಳಿಂದ ಗೂಡನ್ನು ಅಲಂಕರಿಸಿದ್ದು ಗ್ಯಾನೆಟ್ ಕಡಲ ಹಕ್ಕಿ. | |
| 8. | ಗುರುಗಳು ಜೀವನವನ್ನು ಯಾವುದಕ್ಕೆ ಹೋಲಿಸಿದ್ದಾರೆ ?<br>***ಉತ್ತರ :***<br>ಗುರುಗಳು ಜೀವನವನ್ನು ಕಾಫಿಗೆ ಹೋಲಿಸಿದ್ದಾರೆ. | |
| 9. | ಲಂಡನ್‌ನ 'ವ್ಯಾಕ್ಸ್ ಮ್ಯೂಸಿಯಂ'ನ್ನು ಯಾವ ಹೆಸರಿನಿಂದ ಕರೆಯುತ್ತಾರೆ ?<br>***ಉತ್ತರ :***<br>ಲಂಡನ್‌ನ 'ವ್ಯಾಕ್ಸ್ ಮ್ಯೂಸಿಯಂ'ನ್ನು 'ಟುಸ್ಸೋಡ್ ವ್ಯಾಕ್ಸ್ ಮ್ಯುಸಿಯಂ' ಎಂದು ಕರೆಯುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ಗೋಪಾಲನು ಹೊಸ ಪಂಚೆಯನ್ನು ಏಕೆ ಬಯಸಿದನು ?<br>***ಉತ್ತರ :***<br>ಗೋಪಾಲನ ಗೆಳೆಯರು ಅವನನ್ನು ನೋಡಿ ಹಾಸ್ಯ ಮಾಡುತ್ತಿದ್ದುದರಿಂದ ಅವನು ಹೊಸ ಪಂಚೆಯನ್ನು ಬಯಸಿದನು. | |
| 11. | ಬರಡು ಜೀವಕೆ ಹೊಸ ಚೈತನ್ಯ ಸಿಗುವುದು ಯಾವಾಗ ?<br>***ಉತ್ತರ :***<br>ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟಾಗ ಬರಡು ಜೀವಕೆ ಹೊಸ ಚೈತನ್ಯ ಸಿಗುವುದು. | |
| 12. | ಮನಸ್ಸು ಯಾವಾಗ ನೆಲೆಯಿರದೆ ತೊಳಲುತ್ತದೆ ?<br>***ಉತ್ತರ :***<br>ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಿದಾಗ ನೆಲೆಯಿರದೆ ತೊಳಲುತ್ತದೆ. | |
| 13. | ಕುಣಿಗಲ್ ಕೆರೆ ಹೇಗೆ ಬಾಗಿದೆ ?<br>***ಉತ್ತರ :***<br>ಕುಣಿಗಲ್ ಕೆರೆಯು ಬಾಳೆಯ ಹಣ್ಣಿನಂತೆ ಬಾಗಿದೆ. | |
| 14. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ. | |
| 15. | ಉತ್ತರನಿಗೆ ಬಲಗಡಲಿನಂತೆ ಕಂಡ ಸೈನ್ಯ ಯಾವುದು ?<br>***ಉತ್ತರ :***<br>ಉತ್ತರನಿಗೆ ಬಲಗಡಲಿನಂತೆ ಕಂಡ ಸೈನ್ಯ ಕೌರವರ ಸೈನ್ಯ. | |
| 16. | ಉತ್ತರನಿಗೆ ಇಂದ್ರಪದವಿಯು ಏಕೆ ಬೇಕಿಲ್ಲ ?<br>***ಉತ್ತರ :***<br>ಉತ್ತರನಿಗೆ ಅರಸುತನವೆ ಸಾಕು ಹಾಗಾಗಿ ಇಂದ್ರಪದವಿ ಬೇಕಿಲ್ಲ. | |
| III. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | $8 \times 2 = 16$ |
| 17. | ರೈತರು ಉಳುವುದನ್ನು ಬಿಟ್ಟು ಸತ್ಯಾಗ್ರಹ ಮಾಡಿದರೆ ಉಂಟಾಗುವ ಸಮಸ್ಯೆಗಳಾವುವು ?<br>***ಉತ್ತರ :***<br>ಆಹಾರವಿಲ್ಲದೇ ಬರೀ ವೈಜ್ಞಾನಿಕ ಬೆಳವಣಿಗೆಯಿಂದ ಬದುಕಲು ಸಾಧ್ಯವಿಲ್ಲ. ಯಾವ ಕಾರ್ಖಾನೆಯಿಂದಲೂ ಟೊಮೆಟೊ ತಯಾರಿಸಲು, ಅಕ್ಕಿ ಪಡೆಯಲು ಸಾಧ್ಯವಿಲ್ಲ, ರಾಗಿ ಬೆಳೆಯಲು ಸಾಧ್ಯವಿಲ್ಲ. ಇವಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಭೂಮಿಗೆ ಸುರಿಯಬೇಕು. ರೈತರು ಉಳದಿದ್ದರೆ ದೇಶದ ಆಟವೇ ನಡೆಯದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | ಅಸಿಗಿಂತ ಮಸಿ ಶ್ರೇಷ್ಠವಾದುದು ಏಕೆ ?<br>***ಉತ್ತರ :***<br>ಅಸಿಗಿಂತ ಮುಖ್ಯವಾದುದು ಮಸಿ. ಅಸಿ ಎಂದರೆ ಖಡ್ಗ. ಮಸಿ ಎಂದರೆ ಸಾಹಿತ್ಯ ರಚನೆ. 'ಪೆನ್ನು ಖಡ್ಗಕ್ಕಿಂತ ಹರಿತ' ಎನ್ನುವ ಗಾದೆ ಮಾತೇ ಇದೆ. ಖಡ್ಗದಿಂದ ಸಾಧಿಸಲಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಬರವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕಥೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲದು. ಒಂದು ಸರ್ಕಾರ ಉರುಳಿಸಿ ಮತ್ತೊಂದು ಸರ್ಕಾರ ತರಬಲ್ಲದು. ಸಾಹಿತಿಗಳು ನಾಡಿನಲ್ಲಿ ಹೆಚ್ಚಿದಷ್ಟು ಸಮಾಜ ಪ್ರಗತಿಯ ಮೆಟ್ಟಿಲು ತುಳಿಯಲು ಸಾಧ್ಯ. | |
| 19. | ಹಕ್ಕಿಗಳು ಗೂಡುಗಳನ್ನು ಏಕೆ ನಿರ್ಮಿಸುತ್ತವೆ ?<br>***ಉತ್ತರ :***<br>ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡುಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡುಬೇಕು. ಮೊಟ್ಟೆ, ಮರಿಗಳನ್ನು ರಕ್ಷಿಸಿಕೊಳ್ಳಲು ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಗೂಡು ಕಟ್ಟಬೇಕು. | |
| 20. | ಮ್ಯೂಸಿಯಂನ 'ಛೇಂಬರ್ ಆಫ್ ಹಾರರ್ಸ್'ನಲ್ಲಿ ಲೇಖಕರು ಏಕೆ ಅಂಜಿದರು ?<br>***ಉತ್ತರ :***<br>ಛೇಂಬರ್ ಆಫ್ ಹಾರರ್ಸ್‌ನಲ್ಲಿ ಚೀರುವ, ಭಯಾನಕವಾಗಿ ಕಿರುಚುವ ಶಬ್ದ ಕೇಳಿಬರುತ್ತದೆ. ಲೇಖಕರು ಹಾಲಿನೊಳಗಿಂದ ಹೋದಾಗ ಅವರ ಮೇಲೆ ಆಕ್ರಮಣ ಮಾಡಲು ಕತ್ತಿ ಹಿಡಿದು ಒಬ್ಬ ಬಂದ. ಒಬ್ಬ ಕತ್ತು ಹಿಚುಕಲು ಬಂದವನಂತೆ, ವಿಕಾರವಾಗಿ ಕಿರುಚುತ್ತ ಹೊಟ್ಟೆಗೆ ಡ್ಯಾಗರ್ ತಿವಿಯಲು ಬಂದಾಗ ಲೇಖಕರು ಅಂಜಿದರು. | |
| 21. | ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ ?<br>***ಉತ್ತರ :***<br>ಚೈತ್ರಮಾಸದಲ್ಲಿ ಒಣಗಿದ ಮರಗಳು ಚಿಗುರೊಡೆದು ಬರಡು ಜೀವಗಳಿಗೆ ಹೊಸ ಚೈತನ್ಯ ತುಂಬುತ್ತದೆ. ಕುಕಿಲ ಕೋಗಿಲೆಯ ಕಂಠ ಮುಕ ತಾರಕಕ್ಕೇರಿರುತ್ತದೆ. ಎಲ್ಲೆಲ್ಲೂ ಚಿಲಿಪಿಲಿಯ ಕಲರವಗಳು ಮತ್ತೇರಿಸಿದ ಅನುಭವ ನೀಡುತ್ತವೆ ಎಂದು ಕವಿ ವರ್ಣಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | ಕುಣಿಗಲ್ ಕೆರೆಯ ಅಂದವನ್ನು ಹೇಗೆ ವರ್ಣಿಸಲಾಗಿದೆ ?<br>***ಉತ್ತರ :***<br>ಕುಣಿಗಲ್ ಕೆರೆಯು ನೋಡುಗರಿಗೆ ಒಂದು ವೈಭೋಗವೆಂಬಂತೆ ಇದೆ. ಸಂತೆ ಹಾದಿಯ ಸುಂದರ ಕಲ್ಲುಕಟ್ಟೆಯಿಂದ ಕೂಡಿದ್ದು, ಸಂಜೆಯ ಬಾನಿನಲ್ಲಿ ಚಂದ್ರಮ ಮೂಡಿಬರುತ್ತಾನೆ. ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ, ನಿಂಬೆಯ ಹಣ್ಣಿನಂತೆ ತುಂಬಿಕೊಂಡಿದೆ. ಈ ಸೌಂದರ್ಯವನ್ನು ನೋಡಲು ಸಾಕ್ಷಾತ್ ಶಿವನೇ ಬಂದರೂ ಆಶ್ಚರ್ಯವಿಲ್ಲ ಎಂದು ವರ್ಣಿಸಲಾಗಿದೆ. | |
| 23. | ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ ಬಗೆ ಹೇಗೆ ?<br>***ಉತ್ತರ :***<br>ಕಳ್ಳರು ರಾತ್ರಿಯ ಸಮಯದಲ್ಲಿ ವೈದ್ಯರ ಮನೆಗೆ ಬಂದು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಬೇಕೆಂದು ಕೇಳಿಕೊಂಡರು. ವೈದ್ಯರು ತಮ್ಮ ಪ್ರಾಣವನ್ನು ಲೆಕ್ಕಿಸದೇ ರಾತ್ರಿಯಲ್ಲಿ ಕಾಡನ್ನೆಲ್ಲ ಅಳೆದು ಯಾವುದೋ ಸೊಪ್ಪನ್ನು ಹುಡುಕಿ ತಂದು, ರಸ ಮಾಡಿ ಕುಡಿಸಿ ಮಗುವನ್ನು ಪ್ರಾಣಾಪಾಯದಿಂದ ಕಾಪಾಡಿದರು. ಇದನ್ನು ಕಂಡು ಕೃತಜ್ಞತಾಭಾವದಿಂದ ಕಳ್ಳರು ವೈದ್ಯರ ಮನೆಯಲ್ಲಿ ಕದ್ದ ವಸ್ತುಗಳನ್ನೆಲ್ಲ ಮರಳಿ ತಂದು ಒಪ್ಪಿಸಿದರು. | |
| 24. | ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ ?<br>***ಉತ್ತರ :***<br>ಬಣ್ಣ ಬಣ್ಣದ ಚಿಟ್ಟೆಗಳು ಹಾರಾಡುತ್ತ ಭೃಂಗದ ಸಂಗೀತ ಕೇಳಿ ಬರುತ್ತದೆ. ಗಮಗಮಿಸುವ ಹೊಂಗೆ ಹೂವ ಹಾಸಿಗೆಯ ಗಮಲಿನಲ್ಲಿ ಅಡಗಿರುವ ನಾಳೆಯೆಂಬ ಕೂಸಿನ ಬರುವಿಕೆಗಾಗಿ ಜಗತ್ತು ಸಂತೋಷದಾಯಕವಾಗಿದೆಯೆಂದು ಕವಯಿತ್ರಿ ಹೇಳುತ್ತಾರೆ. | |
| IV. | **ಕವಿ / ಸಾಹಿತಿ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 1 × 3 = 3 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | ಕುವೆಂಪು<br>***ಉತ್ತರ :***<br>ಕನ್ನಡದ ವರ್ಡ್ಸ್‌ವರ್ತ್ ಹಾಗೂ ರಾಷ್ಟ್ರಕವಿ ಎಂದು ಖ್ಯಾತರಾಗಿರುವ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ದಿನಾಂಕ ೨೯–೧೨–೧೯೦೪ ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ತಾಲ್ಲೂಕು ಕುಪ್ಪಳಿಯಲ್ಲಿ ಜನಿಸಿದರು. ಇವರ ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ಇವರ ಕಾವ್ಯನಾಮ ಕುವೆಂಪು. | |
| | 'ಚಂದ್ರಮಂಚಕೆ ಬಾ ಚಕೋರಿ', 'ನವಿಲು', 'ಪಕ್ಷಿಕಾಶಿ' (ಕವನಸಂಕಲನಗಳು) 'ಬೆರಳ್‌ಗೆ ಕೊರಳ್', 'ಶೂದ್ರತಪಸ್ವಿ', 'ಜಲಗಾರ' (ನಾಟಕಗಳು) 'ರಸೋವೈಸಃ', 'ವಿಭೂತಿ ಪೂಜೆ', 'ದ್ರೌಪದಿಯ ಸಿರಿಮುಡಿ' (ವಿಮರ್ಶೆಗಳು) 'ನನ್ನ ದೇವರು ಮತ್ತು ಇತರ ಕತೆಗಳು' (ಸಣ್ಣಕಥೆ). 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು' (ಕಾದಂಬರಿಗಳು). 'ಶ್ರೀ ರಾಮಾಯಣ ದರ್ಶನಂ' (ಮಹಾಕಾವ್ಯ) – ಇವೇ ಮೊದಲಾದ ೮೦ ಕೃತಿಗಳನ್ನು ಕುವೆಂಪು ಅವರು ರಚಿಸಿದ್ದಾರೆ. | |
| | ಕುವೆಂಪು ಅವರು ಪದ್ಮಭೂಷಣ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪಂಪ ಹಾಗೂ ಕರ್ನಾಟಕ ರತ್ನ ಪ್ರಶಸ್ತಿಗಳಿಂದ ಪುರಸ್ಕೃತರು. ಇವರು ದಿನಾಂಕ ೧೦–೧೧–೧೯೯೪ ರಲ್ಲಿ ನಿಧನ ಹೊಂದಿದರು. | |
| V. | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | 1 × 3 = 3 |
| | ಪಾಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ನೀರ ಕಂಡಲ್ಲಿ ಮುಳುಗುವರಯ್ಯ<br>ಮರನ ಕಂಡಲ್ಲಿ ಸುತ್ತುವರಯ್ಯ<br>ಬತ್ತುವ ಜಲವ ಒಣಗುವ ಮರನ<br>ಮೆಚ್ಚಿದವರು ನಿಮ್ಮನ್ನೆತ್ತ ಬಲ್ಲರು<br>ಕೂಡಲ ಸಂಗಮದೇವ | |
| | ***ಉತ್ತರ :*** | |
| | ನೀರನ್ನು ಕಂಡಲ್ಲಿ ಮುಳುಗಿ ಏಳುವುದರಿಂದ, ಮರವನ್ನು ಕಂಡಲ್ಲಿ ಸುತ್ತುಹಾಕುವುದರಿಂದ ಯಾವ ಪ್ರಯೋಜನವೂ ಇಲ್ಲ. ಬತ್ತಿ ಹೋಗುವ ಜಲವನ್ನು ಮೆಚ್ಚುವವರು, ಒಣಗಿ ಹೋಗುವ ಮರವನ್ನು ಮೆಚ್ಚುವವರು ಶಾಶ್ವತವಾಗಿರುವ ದೇವರನ್ನು ಹೇಗೆ ತಾನೆ ಸ್ಮರಿಸುತ್ತಾರೆ ? ಮಾನವರು ಅರ್ಥವಿಲ್ಲದ ಆಚರಣೆಗಳನ್ನು ಬಿಟ್ಟು ವೈಚಾರಿಕತೆಯುಳ್ಳವರಾಗಿ, ಕಾಯಕ ತತ್ವವನ್ನು ಪಾಲಿಸಬೇಕೆಂಬುದು ಬಸವಣ್ಣನವರ ವಚನದ ಸಾರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VI. | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | $1 \times 3 = 3$ |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | "ಕುಣಿಗಲ್ ಕೆರೆ ಬಾಳೆಯ ಹಣ್ಣಿನಂತೆ ಬಾಗಿದೆ"<br>***ಉತ್ತರ :***<br>*ಅಲಂಕಾರದ ಹೆಸರು* : ಉಪಮಾಲಂಕಾರ<br>*ಲಕ್ಷಣ :* ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.<br>*ಉಪಮೇಯ :* ಕುಣಿಗಲ್ ಕೆರೆ<br>*ಉಪಮಾನ :* ಬಾಳೆಯ ಹಣ್ಣು<br>*ಉಪಮಾವಾಚಕ :* ಅಂತೆ<br>*ಸಮಾನಧರ್ಮ :* ಬಾಗಿರುವುದು<br>*ಸಮನ್ವಯ :* ಇಲ್ಲಿ ಕುಣಿಗಲ್ ಕೆರೆ ಎಂಬ ಉಪಮೇಯವನ್ನು, ಬಾಳೆಯ ಹಣ್ಣು ಎಂಬ ಉಪಮಾನದ ಮೂಲಕ ಬಾಗಿದೆ ಎಂಬ ಸಮಾನಧರ್ಮವನ್ನು ಹೇಳಿ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ. | |
| VII. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | $1 \times 3 = 3$ |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | "ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು"<br>***ಅಥವಾ***<br>"ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ" | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 5 × 3 = 15 |
| | ಕೃತಿ, ಕರ್ತೃ, ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |

29. "ಇಂಥಹ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ ?"

***ಉತ್ತರ :***

"ಇಂಥಹ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯ ?" ಈ ವಾಕ್ಯವನ್ನು ಅ.ರಾ.ಮಿತ್ರರವರು ಬರೆದ 'ಮಹಾಭಾರತದ ಪಾತ್ರ ಸಂಗತಿಗಳು' ಪುಸ್ತಕದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಇಂದ್ರನು ಗಿಳಿಗೆ ಕೇಳಿದನು. ಒಣಗಿ ನಿಂತ ಮರವನ್ನು ಬಿಟ್ಟು ಹೋಗದೇ ಅಲ್ಲಿಯೇ ವಾಸವಾಗಿರುವ ಗಿಳಿಯನ್ನು ಕಂಡು ಇಂದ್ರನು ಆಶ್ಚರ್ಯಗೊಂಡು ಈ ಮಾತನ್ನು ಕೇಳಿದನು. ಜೀವಸಂಕುಲದ ಮೇಲಿರುವ ದಯೆ, ಪ್ರೀತಿ, ಕಾಳಜಿ ಇಂದ್ರನು ಕೇಳುವ ಈ ಮಾತಿನಲ್ಲಿ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

30. "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ."

***ಉತ್ತರ :***

"ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಮ್ ಅಲ್ಲ" ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ಯವರು ಬರೆದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿಗಳು' ಎಂಬ ಜೀವನ ಚರಿತ್ರೆಯ, ಗಾನಯೋಗಿ ಪಂಡಿತ ಪುಟ್ಟರಾಜು ಗವಾಯಿಗಳು ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಬಾಲಕ ಪುಟ್ಟರಾಜರ ಮಾವನವರಾದ ಚಂದ್ರಶೇಖರಯ್ಯನವರು ಹೇಳಿದರು. ಬಾಲಕ ಪುಟ್ಟರಾಜರಿಗೆ ಮನೆಯಲ್ಲಿದ್ದ ಹಾರ್ಮೋನಿಯಮ್ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಮಾವನ ಹಾರ್ಮೋನಿಯಮ್ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ. ಪುಟ್ಟರಾಜನ ನಾದ ಮಾಧುರ್ಯ ಮನೆಯನ್ನು ತುಂಬಿ ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರ ಮನಸ್ಸು ಸೂರೆಗೊಂಡು ಜನರೆಲ್ಲ ಮನೆಯೊಳಗೆ ಬಂದು ಕುಳಿತರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಹಾರ್ಮೋನಿಯಮ್ ನುಡಿಸುತ್ತಿರುವವರು ಯೋಗಿಗಳೇ ಇರಬಹುದೆಂದು ಎಣಿಸಿ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಒಳಬಂದರು. ಪುಟ್ಟರಾಜನು ಹಾರ್ಮೋನಿಯಮ್ ನುಡಿಸುವುದನ್ನು ಕಂಡು ನಿಬ್ಬೆರಗಾದರು. ಮಾವನ ಪಾದ ಸಪ್ಪಳದಿಂದ ವಿಚಲಿತನಾದ ಬಾಲಕ 'ಕ್ಷಮಿಸು, ತಪ್ಪಾಯಿತು ಇನ್ನೊಮ್ಮೆ ಹಾರ್ಮೋನಿಯಮ್ ಮುಟ್ಟುವುದಿಲ್ಲ' ಎಂದಾಗ ಮಾವ ಹೇಳುವ ಮಾತು ಇದು. ಬಾಲಕ ಪುಟ್ಟರಾಜನ ಸಂಗೀತದ ಆಸಕ್ತಿ, ಗುರುಹಿರಿಯರ ಮೇಲಿನ ಗೌರವಾದರ ಕಂಡು ವಾತ್ಸಲ್ಯಪೂರ್ಣವಾಗಿ ಮಾವ ಹೇಳುವ ಮಾತಿದು. | |
| 31. | "ನೀವೇ ಕಾಫೀ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ."<br>***ಉತ್ತರ :***<br>"ನೀವೇ ಕಾಫಿ ಹಾಕಿಕೊಳ್ಳಿ ಆಮೇಲೆ ಕುಳಿತು ಮಾತನಾಡೋಣ."<br>ಈ ವಾಕ್ಯವನ್ನು ಗುರುರಾಜ ಕರ್ಜಗಿಯವರು ಬರೆದ 'ಕರುಣಾಳು ಬಾ ಬೆಳಕೆ' ಎಂಬ ಪುಸ್ತಕದ 'ಕಾಫೀಕಪ್ಪು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.<br>ಗುರುಗಳು ಹಳೆಯ ವಿದ್ಯಾರ್ಥಿಗಳಿಗೆ ಈ ಮಾತನ್ನು ಹೇಳಿದರು. ಹಳೆಯ ವಿದ್ಯಾರ್ಥಿಗಳು ಗುರುಗಳನ್ನು ನೋಡಲು ಅವರ ಮನೆಗೆ ಬಂದರು. ಗುರುಗಳು ಸಂತೋಷದಿಂದ ಅವರನ್ನು ಬರಮಾಡಿಕೊಂಡು ಕೂಡ್ರಿಸಿ ಮಾತನಾಡಿಸುತ್ತಿದ್ದರು. ಹಾಗೆಯೇ ತನ್ನ ಕಾಫೀ ಕೂಡ ಚೆನ್ನಾಗಿರುತ್ತದೆಂದು ಹೇಳಿ ಹತ್ತೇ ನಿಮಿಷದಲ್ಲಿ ದೊಡ್ಡ ಪಾತ್ರೆಯಲ್ಲಿ ಬಿಸಿಬಿಸಿ ಕಾಫಿ ಮಾಡಿ ತಂದು, ಹಾಗೆಯೇ ಕಪ್ಪುಗಳನ್ನು ತಂದಿಟ್ಟು ಈ ಮೇಲಿನಂತೆ ನುಡಿದರು. ಈ ಮಾತಿನಲ್ಲಿ ವಿದ್ಯಾರ್ಥಿಗಳ ಬಗೆಗಿನ ಕಾಳಜಿ, ಪ್ರೀತಿ, ಗುರುಶಿಷ್ಯರ ನಿಕಟ ಬಾಂಧವ್ಯ ವ್ಯಕ್ತವಾಗಿದೆ. | |
| 32. | "ನನಗೆ ಬೀಳುವ ಭಯವಿಲ್ಲ."<br>***ಉತ್ತರ :***<br>ಈ ವಾಕ್ಯವನ್ನು ಸುಕನ್ಯಾ ಮಾರುತಿಯವರು ಬರೆದ 'ಏಣಿ' ಎಂಬ ಪದ್ಯದಿಂದ ಆರಿಸಲಾಗಿದೆ. 'ಏಣಿ'ಯು ಈ ಮಾತನ್ನು ಹೇಳುತ್ತದೆ. ಏಣಿಯು ಎಷ್ಟೊಂದು ಜನರನ್ನು ಮೇಲಕ್ಕೆ ಎತ್ತಿಹಿಡಿದಿದೆ. ಆದರೆ ಲೀಲಾಜಾಲವಾಗಿ ಮೇಲೇರಿದವರಿಗೆ ಭಾರ ಹೊತ್ತವರ ಕಾಳಜಿಯಿಲ್ಲ. ಅವರ ಒಂದೊಂದು ಹೆಜ್ಜೆಯ ಭಾರ ಹೊರುವ ಕಷ್ಟ ಏಣಿಗೆ ಮಾತ್ರ ಗೊತ್ತು. ಆದರೆ ಆನೆಯ ಭಾರ ಹೊತ್ತು ಗಟ್ಟಿ ನೆಲದಲ್ಲಿ ಕಾಲೂರಿನಿಂತ ತನಗೆ ಬೀಳುವ ಭಯವಿಲ್ಲ ಎಂದು ಏಣಿ ಹೇಳುತ್ತದೆ. ಹಣ, ಅಂತಸ್ತು, ಅಧಿಕಾರಗಳು ದೊರೆತ ನಂತರ ವ್ಯಕ್ತಿಗಳಲ್ಲಿ ಆಗುವ ಬದಲಾವಣೆಗಳನ್ನು ಏಣಿಯ ಈ ಮಾತು ಪ್ರತಿಬಿಂಬಿಸುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | "ಒಂದು ಜೀವನಕೇಕೆ ಹಲವು ಸಾಧ್ಯಗಳು ?"<br>***ಉತ್ತರ :***<br>ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ'ದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.<br>ಜೀವನದಲ್ಲಿ ನಿಶ್ಚಿತವಾಗಿ ಇರಬೇಕಾದ ಗುರಿಯ ಬಗ್ಗೆ ಕವಿಯು ಹೇಳಿರುವ ಮಾತು ಇದು. ಜೀವನದಲ್ಲಿ ಹಲವಾರು ಗುರಿಯನ್ನು ಇಟ್ಟುಕೊಂಡು ಯಶಸ್ಸು ಕಾಣಲು ಸಾಧ್ಯವಿಲ್ಲ. ಒಂದು ಬಾಣಕ್ಕೆ ಗುರಿ ಹೇಗೆ ಒಂದೇ ಇರುತ್ತದೆಯೋ ಹಾಗೆಯೇ ದೇಹಕ್ಕೆ ಆತ್ಮ ಒಂದೇ. ಅದೇ ರೀತಿ ನಮ್ಮ ಜೀವನಕ್ಕೆ ಒಂದೇ ಗುರಿಯಿರಬೇಕು.<br>ಗುರಿಯನ್ನು ಸಾಧಿಸಲು ಬೇಕಾದ ಏಕಾಗ್ರತೆಯ ಬಗ್ಗೆ ಈ ಮಾತಿನಲ್ಲಿ ವ್ಯಕ್ತವಾಗಿದೆ. | |
| IX. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು) | $1 \times 4 = 4$ |
| 34. | ಏಕಾಂಗಿ ವೀರನಂತೆ ..........................................<br>..................................................................<br>..................................................................<br>.......................................... ಕತ್ತಲಲ್ಲಿ ನಡೆದನು.<br>***ಅಥವಾ***<br>ಕಾಡು ಕಾಡು ಅಲೆದ .......................................<br>..................................................................<br>..................................................................<br>.............................. ಮಹಾಬೆಳಕೊಂದು ಕಂಡಿತು.<br>***ಉತ್ತರ :***<br>ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು<br>ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು।<br>ಅರಮನೆಯ ಮೋಹವನ್ನು ಹರಿದುಹಾಕಿ ಹೋದನು<br>ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು<br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು<br>ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು ।<br>ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು<br>ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು ॥ | |
| X. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | 'ಸದ್ದು ಮಾಡದಿರು' ಪದ್ಯದಲ್ಲಿ ನೀವು ಮೆಚ್ಚುವ ಸಂದೇಶವನ್ನು ವಿಸ್ತರಿಸಿ ಬರೆಯಿರಿ.<br>**ಅಥವಾ**<br>'ಸದ್ದು ಮಾಡದಿರು' ಪದ್ಯದ ಸಾರಾಂಶವನ್ನು ಮಾನವೀಯ ಮೌಲ್ಯಗಳೊಂದಿಗೆ ವಿವರಿಸಿ.<br>***ಉತ್ತರ :***<br>ಆಡಂಬರ, ಪ್ರದರ್ಶನ ಇವುಗಳಿಗೆ ಜನ ಮನಸೋಲುವುದು ಸಾಮಾನ್ಯ. ಸಂಪತ್ತು, ಹೆಸರು, ಕೀರ್ತಿ ಇವುಗಳನ್ನು ಪಡೆಯುವುದೇ ಜೀವನದ ಸಾರ್ಥಕ್ಯವೆಂದು ಬಹಳಷ್ಟು ಮಂದಿ ತಿಳಿದಿದ್ದಾರೆ. ಆದರೆ ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ಯಾವುದೇ ಸದ್ದು ಗದ್ದಲವಿಲ್ಲದೇ ತನ್ನೆಲ್ಲಾ ಕಾರ್ಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತಲೇ ಇದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿರುವುದು, ಕಾಮನಬಿಲ್ಲು ಗೋಚರವಾಗುವುದು, ಪುಷ್ಪವು ಅರಳಿ ಪರಿಮಳ ಸೂಸುವುದು, ಕಾಯಿಗಳು ಮಾಗಿ ರಸಭರಿತ ಹಣ್ಣಾಗುವುದು ಇಂತಹ ನೂರಾರು ಅದ್ಭುತಗಳು ಪ್ರಕೃತಿಯಲ್ಲಿ ನಿತ್ಯ ನಿರಂತರವಾಗಿರುತ್ತವೆ. ಅವು ಎಂದಿಗೂ ತಮ್ಮ ಕಾರ್ಯದ ಬಗ್ಗೆ ಹೇಳಿಕೊಂಡಿಲ್ಲ. ಆದರೆ ಮಾನವ ಸಣ್ಣ ಕೆಲಸವನ್ನೂ ದೊಡ್ಡದಾಗಿ ತನ್ನಿಂದಲೇ ಸಾಧ್ಯವಾಗಿದ್ದು ಎಂದು ಪ್ರಚಾರ ಮಾಡಿಕೊಳ್ಳುತ್ತಾನೆ. ಹಸೀಸೌದೆಯಿಂದ ಬರೀ ಶಬ್ದ ಬರುವುದೇ ಹೊರತು ಬೆಂಕಿ ಬರುವುದಿಲ್ಲ. ಹಾಗಾಗಿ ಕತ್ತಲೆಯು ದೀಪದ ಎದುರು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮೌನವಾಗಿ ಮಾಯವಾಗುವಂತೆ, ಕರ್ಪೂರ ಮೌನವಾಗಿ ಕರಗುವ ರೀತಿ, ರವಿಯ ಕಿರಣಗಳಿಗೆ ಇಬ್ಬನಿಯು ಕರಗುವ ರೀತಿಯಲ್ಲಿ ಮಾನವರು ಸಿಡುಕು ಮಿಡುಕನು ತೊರೆದು ಮೌನಿಗಳಾಗಿ ಬಾಳಬೇಕು ಎಂಬ ಸಂದೇಶ ಈ ಪದ್ಯದಲ್ಲಿ ವ್ಯಕ್ತವಾಗಿದೆ. | |
| | ***ಅಥವಾ*** | |
| | ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ನಿಸ್ವಾರ್ಥವಾಗಿ ಯಾವುದೇ ಸದು ಗದ್ದಲವಿಲ್ಲದೇ ತನ್ನೆಲ್ಲಾ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲಿದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿರುವುದು, ಕಾಮನಬಿಲ್ಲು ಗೋಚರವಾಗುವುದು, ಪುಷ್ಪವು ಅರಳಿ ಪರಿಮಳ ಸೂಸುವುದು, ಕಾಯಿಗಳು ಮಾಗಿ ರಸಭರಿತ ಹಣ್ಣಾಗುವುದು. ಇಂತಹ ನೂರಾರು ಅದ್ಭುತಗಳು ಪ್ರಕೃತಿಯಲ್ಲಿ ನಿತ್ಯ ನಿರಂತರ ಹಾಗೂ ಮಾನವನಿಗೆ ಮಾದರಿ ಕೂಡ. ಅವು ಎಂದಿಗೂ ತಮ್ಮ ಕಾರ್ಯದ ಬಗ್ಗೆ ಹೇಳಿಕೊಂಡಿಲ್ಲ. ಆಡಂಬರ, ಪ್ರದರ್ಶನ ಇವುಗಳಿಗೆ ಮನಸೋಲುವ ಜನ ಸಂಪತ್ತು, ಹೆಸರು, ಕೀರ್ತಿ ಪಡೆಯುವುದೇ ಜೀವನ ಸಾರ್ಥಕ್ಯವೆಂದು ತಿಳಿದಿದ್ದಾರೆ. ಸಣ್ಣ ಕೆಲಸವನ್ನು ದೊಡ್ಡದಾಗಿ ತನ್ನಿಂದಲೇ ಸಾಧ್ಯವಾಗಿದ್ದು ಎಂದು ಪ್ರಚಾರ ಮಾಡಿಕೊಳ್ಳುತ್ತಾರೆ. ಮಾನವ ತನ್ನ ಅಹಂ ತೊರೆದು ಪ್ರಕೃತಿಯ ಹಾಗೆಯೇ ನಿಸ್ವಾರ್ಥತೆಯಿಂದ, ಶಾಂತಿ, ಸಹನೆ, ಪ್ರೀತಿಗಳಿಂದ ಕರ್ತವ್ಯವನ್ನು ಮೌನವಾಗಿ ಮಾಡಬೇಕು ಎಂಬ ಮೌಲ್ಯಗಳನ್ನು ಪದ್ಯದ ಸಂದೇಶ ಸಾರುತ್ತದೆ. | |
| XI. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | 1 × 4 = 4 ( 2 + 2 ) |
| 36. | ಜಗತ್ತಿನ ಮೋಹಕ ಉದ್ಯಾನಗಳಲ್ಲೊಂದಾದ ಬೆಂಗಳೂರಿನ ಲಾಲ್‌ಬಾಗ್‌ನ ಚೆಲುವನ್ನು ಹೀರಿ ಹೀರಿ ತಣಿಯದವರಾರು ? ಆ ಹೆಸರನ್ನು ಕೇಳಿದೊಡನೆಯೆ ನಿಸರ್ಗ ಶಿವಾರಾಧಕರು ರಸಸಮಾಧಿಯಲ್ಲಿ ಮುಳುಗೇಳುತ್ತಾರೆ. ಪುಳಕಿತರಾಗುತ್ತಾರೆ. ಪ್ರತಿನಿತ್ಯವೂ ಸೂರ್ಯೋದಯ, ಸೂರ್ಯಾಸ್ತದ ಸಮಯದಲ್ಲಿ ದೇವತೆಗಳು ಭೂಮಿಗಿಳಿದು ಬಂದು ಸೌಂದರ್ಯವಾರಾಶಿಯಲ್ಲಿ ಮಿಂದು ಪುನೀತರಾಗುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ರಾಜ್ಯದ ಅನೇಕ ಉದ್ಯಾನಗಳಿಗೆ ಜನ್ಮವಿತ್ತ ಲಾಲ್‌ಬಾಗ್ 'ಉದ್ಯಾನರಾಣಿ' ಎಂಬ ಬಿರುದಿಗೆ ಪಾತ್ರವಾಗಿದೆ. ಇಂತಹ ಉದ್ಯಾನ ರಾಜ್ಯಕ್ಕೆ ಕಾರಣರಾದವರು ಯಾರು ? ಅವರೇ ಸಸ್ಯವಿಜ್ಞಾನಿ, ನಿಸರ್ಗ ಪ್ರೇಮಿ, ಸದಾರೈತ ಹಿತಾಕಾಂಕ್ಷಿ ಡಾ. ಎಂ.ಹೆಚ್. ಮರಿಗೌಡರು. ನೊಬೆಲ್ ಪ್ರಶಸ್ತಿ ವಿಜೇತ ಸಿ.ವಿ. ರಾಮನ್‌ರವರು ಲಾಲ್‌ಬಾಗ್‌ನ ಅತಿಶಯ ಸೌಂದರ್ಯಕ್ಕೆ ಮಾರುಹೋಗಿ ಅದಕ್ಕೆ ಕಾರಣರಾದ ಡಾ. ಎಂ.ಹೆಚ್. ಮರಿಗೌಡರಿಗೆ ನಾಗರಿಕರು ಕೃತಜ್ಞರಾಗಿರಬೇಕೆಂದು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ರಾಷ್ಟ್ರದ ಬಂಜರು ಭೂಮಿಯ ಸಾಗುವಳಿ ಅತ್ಯಗತ್ಯವೆಂಬುದನ್ನು ಮೊಟ್ಟಮೊದಲಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟ ಕೀರ್ತಿಯು ಮರಿಗೌಡರಿಗೆ ಸಲ್ಲಬೇಕು. ಎಲ್ಲಕ್ಕಿಂತ ಮಿಗಿಲಾಗಿ ರೈತರ ಕ್ಷೇಮದ ಬಗೆಗಿನ ಅವರ ಕಳಕಳಿ ಅಸಾಧಾರಣವಾದದ್ದು. ಆರ್ಥಿಕ ಪ್ರಗತಿಗೆ, ವಾಣಿಜ್ಯಾಭಿವೃದ್ಧಿಗೆ, ಅಂತಾರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆಯನ್ನು ನಿರ್ಮಿಸಬೇಕೆಂಬುದು ಮರಿಗೌಡರ ಹೇರಾಸೆ.

ಈ ಕಾರಣಗಳಿಂದ ಡಾ. ಮರಿಗೌಡರು ಕರ್ನಾಟಕದ ಹಾಗೂ ಭರತಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಅಜರಾಮರರಾಗಿದ್ದಾರೆ.

ಗಿಡಗಳ ಸಮೃದ್ಧವಾದ ಬೆಳೆವಣಿಗೆಗೆ ನೀರು, ಗೊಬ್ಬರ, ಮಾತ್ರ ಸಾಲದು. ಮಾನವನ ಪ್ರೀತಿಯ ವರ್ಷವೂ ಬೇಕು. ಇಂತಹ ಪ್ರೀತಿಯನ್ನು ವರ್ಷಿಸುವ ತನ್ನ ಆತ್ಮವನ್ನು ನಿವೇದಿಸಿಕೊಳ್ಳುವ ವೃಕ್ಷಪ್ರೇಮಿಯ ಆಗಮನದಿಂದ ಇಡೀ ಲಾಲ್‌ಬಾಗೇ ಚೇತರಿಸಿಕೊಂಡಿದೆ. ಕನ್ನಡನಾಡಿನ ಮಣ್ಣು ಪುಳಕಗೊಂಡಿದೆ.

*ಪ್ರಶ್ನೆಗಳು :*

ಅ) ಲಾಲ್‌ಬಾಗ್ ಕಂಡಾಗ ನಿಸರ್ಗ ಶಿವಾರಾಧಕರಿಗೆ ಆಗುವ ಅನುಭವಗಳೇನು ?

ಬ) ಮರಿಗೌಡರು ಭರತಖಂಡದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಹೇಗೆ ಅಜರಾಮರರಾಗಿದ್ದಾರೆ ?

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | ಅ) ಲಾಲ್‌ಬಾಗ್ ಹೆಸರನ್ನು ಕೇಳಿದೊಡನೆಯೆ ನಿಸರ್ಗ ಶಿವಾರಾಧಕರು ರಸಸಮಾಧಿಯಲ್ಲಿ ಮುಳುಗೇಳುತ್ತಾರೆ. ಪುಳಕಿತರಾಗುತ್ತಾರೆ. ಪ್ರತಿನಿತ್ಯವೂ ಸೂರ್ಯೋದಯ, ಸೂರ್ಯಾಸ್ತದ ಸಮಯದಲ್ಲಿ ದೇವತೆಗಳು ಭೂಮಿಗಿಳಿದು ಬಂದು ಸೌಂದರ್ಯವಾರಾಶಿಯಲ್ಲಿ ಮಿಂದು ಪುನೀತರಾಗುತ್ತಾರೆ. | |
| | ಬ) ರಾಷ್ಟ್ರದ ಬಂಜರು ಭೂಮಿಯ ಸಾಗುವಳಿ ಅತ್ಯಗತ್ಯವೆಂಬುದನ್ನು ಮೊತ್ತಮೊದಲಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟ ಕೀರ್ತಿಯು ಇವರದು. ಎಲ್ಲಕ್ಕಿಂತ ಮಿಗಿಲಾಗಿ ರೈತರ ಕ್ಷೇಮದ ಬಗೆಗಿನ ಅವರ ಕಳಕಳಿ ಅಸಾಧಾರಣವಾದದ್ದು. ವಾಣಿಜ್ಯಾಭಿವೃದ್ಧಿಯಲ್ಲಿ, ಆರ್ಥಿಕ ಪ್ರಗತಿಯಲ್ಲಿ, ಅಂತಾರಾಷ್ಟ್ರೀಯ ಬಾಂಧವ್ಯಕ್ಕೆ ತೋಟಗಾರಿಕೆ ಬೆಳೆಗಳು ಹೊಸ ದಾಖಲೆ ನಿರ್ಮಿಸಬೇಕೆಂಬ ನಿಟ್ಟಿನಲ್ಲಿ ದುಡಿದವರು. ಆದುದರಿಂದ ಪ್ರಾಯೋಗಿಕ ವಿಜ್ಞಾನದ ಇತಿಹಾಸದಲ್ಲಿ ಮರಿಗೌಡರು ಅಜರಾಮರರಾಗಿದ್ದಾರೆ. | |
| XII. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | $1 \times 4 = 4$ |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಅರಣ್ಯ ಸಂರಕ್ಷಣೆ<br>***ಅಥವಾ***<br>ಶೈಕ್ಷಣಿಕ ಪ್ರವಾಸ | |
| XIII. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | $1 \times 5 = 5$ |
| 38. | ನಿಮ್ಮನ್ನು ತುಮಕೂರಿನ ಸರ್ಕಾರಿ ಪ್ರೌಢಶಾಲೆಯ 'ರವಿ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆರೋಗ್ಯ ತಪಾಸಣೆ ಕೈಗೊಳ್ಳುವಂತೆ ಕೋರಿ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಯವರಿಗೆ ಮನವಿ ಪತ್ರವನ್ನು ಬರೆಯಿರಿ.<br>***ಅಥವಾ***<br>ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ 'ಕಾವ್ಯ' ಎಂದು ಭಾವಿಸಿಕೊಂಡು, ಶಾಲೆಯಲ್ಲಿ ಆಚರಿಸಿದ 'ಕನ್ನಡ ರಾಜ್ಯೋತ್ಸವ' ಕಾರ್ಯಕ್ರಮದ ವಿವರವನ್ನು ತಿಳಿಸಿ ಮಂಗಳೂರಿನ ದೇವಸ್ಥಾನ ಬೀದಿಯ ನಿವಾಸಿಯಾದ 'ಪ್ರತಿಭಾ' ಎಂಬ ಹೆಸರಿನ ಗೆಳತಿಗೆ ಪತ್ರವನ್ನು ಬರೆಯಿರಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | ***ಅಥವಾ*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದ ಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |